ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ
E-mail : kannadapostnews@gmail.com / ಕನ್ನಡ post
Price: ₹1
Vol.No.02 | Issue. 90 | Pages. 2 | Date: 08-03-2026, SUNDAY
RNI NO: KARKAN/2024/89601
Kannada Daily
ಸಂಪುಟ : 02 - ಸಂಚಿಕೆ : 90 - ಪುಟಗಳು : 2 08-03-2026 ಭಾನುವಾರ
Ph: 8762954248
ದರ : ₹1

# ಇನ್ಮುಂದೆ ಪ್ರತಿ ವರ್ಷ ಹಾಸನದಲ್ಲಿ ಉದ್ಯೋಗ ಮೇಳ

## ಸಂಸದ ಶ್ರೇಯಸ್ ಪಟೇಲ್ ಘೋಷಣೆ | ಉದ್ಯೋಗಾಕಾಂಕ್ಷಿಗಳಿಂದ ಭರ್ಜರಿ ರೆಸ್ಪಾನ್ಸ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಯುವ ಉದ್ಯೋಗ ಮೇಳವನ್ನು ಪ್ರತಿವರ್ಷ ಆಯೋಜಿಸಲಾಗುವುದು ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ವತಿಯಿಂದ ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದಯುವ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದರು.

ಸಂದರ್ಶನದಲ್ಲಿ 150ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿ 6 ಸಾವಿರ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದಾರೆ. ವಿವಿಧ ಕಂಪನಿಗಳಲ್ಲಿ ಖಾಲಿ ಇರುವ ಉದ್ಯೋಗಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಶಿವಕಾಂತಮ ಮಾತನಾಡಿ, ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಜೊತೆಗೆ ಅವರ ಕೌಶಲ್ಯಾಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದರು.

200ಕ್ಕೂ ಹೆಚ್ಚು ಕಂಪನಿಗಳು ನೋಂದಣಿ ಮಾಡಿಕೊಂಡಿದ್ದು, ಸುಮಾರು 180 ಕಂಪನಿಗಳು ಮೇಳದಲ್ಲಿ ಭಾಗವಹಿಸಿವೆ, ಇಂದಿನ ದಿನಗಳಲ್ಲಿ ಉದ್ಯೋಗ ಹುಡುಕುವುದಕ್ಕಿಂತ ಉದ್ಯೋಗ ಸೃಷ್ಟಿ ಮಾಡುವ ಮನೋಭಾವ ಯುವಕರಲ್ಲಿ ಬೆಳೆಬೇಕು ಎಂದು ಹೇಳಿದರು.

ಯುವಕರು ಮೊಬೈಲ್ ಬಳಕೆಯಿಂದ ದೂರವಿದ್ದು ತಮ ಕೌಶಲ ಅಭಿವೃದ್ಧಿಪಡಿಸಿಕೊಳ್ಳಬೇಕು. ಕೌಶಲ ಇದ್ದರೆ ಉದ್ಯೋಗ ಸಿಗುವುದು ಸುಲಭ. ಉದ್ಯೋಗ ಸಿಗದ ಅಭ್ಯರ್ಥಿಗಳು ತರಬೇತಿ ಪಡೆದು ತಮ ಸಾಮರ್ಥ್ಯವನ್ನು




ಹೆಚ್ಚಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಉದ್ಯೋಗ ಮೇಳದ ಮೂಲಕ ಹೆಚ್ಚಿನ ಯುವಕರಿಗೆ ಉದ್ಯೋಗ ದೊರೆಯಬೇಕು. ನೇರವಾಗಿ ಉದ್ಯೋಗ ಕಲ್ಪಿಸುವ ಗುರಿ ಹೊಂದಬೇಕು ಎಂದು ಹೇಳಿದರು.

### ವಿಶೇಷ ಚೇತನರಿಗೆ ಮೀಸಲಾತಿ

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಉದ್ಯೋಗ ಮೇಳಕ್ಕೆ ಆನ್‌ಲೈನ್ ಮೂಲಕ ಸುಮಾರು 4 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, 3000 ಯುವಕ- ಯುವತಿಯರು ಭಾಗವಹಿಸಿದ್ದಾರೆ. ಜಿಲ್ಲೆಯ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ. ವಿಶೇಷ ಚೇತನರಿಗೆ ಶೇ. 5ರಷ್ಟು ಮೀಸಲಾತಿಯೂ ಕಲ್ಪಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯ ಮಕ್ಕಳು ಉತ್ತಮ ಉದ್ಯೋಗದಲ್ಲಿರಬೇಕು ಆರ್ಥಿಕತೆ ವೃದ್ಧಿಸಿಕೊಂಡು ದೇಶದ ಆರ್ಥಿಕತೆ ಕೊಡುಗೆಯನ್ನು ನೀಡುವ ಮೂಲಕ ಪ್ರಗತಿ ಪರ ರಾಷ್ಟ್ರವನ್ನಾಗಿಸಬೇಕು, ಯುವ ಜನತೆ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಅಮೂಲ್ಯವಾದವು ಜೀವನವನ್ನು ರೂಪಿಸಿಕೊಳ್ಳಬೇಕು ಎಂದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಒಂದೇ ಸೂರಿನಡಿ ಹಲವು ಕಂಪನಿಗಳು ಭಾಗವಹಿಸಿರುವುದು ಯುವಕರ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗಿದೆ. ಈ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಆಯ್ಕೆಯಾದ 5 ಅಭ್ಯರ್ಥಿಗಳಿಗೆ ಸಾಂಕೇತಿಕವಾಗಿ ನೇಮಕಾತಿ ಪತ್ರ ವಿತರಿಸಲಾಯಿತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಪ್ರಾಂಶುಪಾಲ ಗಿರೀಶ್ ಹಾಗೂ ಇತರರಿದ್ದರು.

### 1,314 ಜನರಿಗೆ ಉದ್ಯೋಗ ಖಾತ್ರಿ

ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಯುವ ಉದ್ಯೋಗ ಮೇಳದಲ್ಲಿ 1,314 ಜನರಿಗೆ ಸಂದರ್ಶನದ ದಿನವೇ ಉದ್ಯೋಗ ಖಾತ್ರಿ ನೀಡಲಾಯಿತು. ಆನ್‌ಲೈನ್ ಮೂಲಕ 6,210 ಜನರು ಹಾಗು ಆಫ್‌ಲೈನ್‌ನಲ್ಲಿ 3,225 ಯುವಕ-ಯುವತಿಯರು ಹೆಸರು ನೋಂದಾಯಿಸಿದ್ದರು. ಒಟ್ಟು 149 ಕಂಪನಿಗಳು ವಿವಿಧ ಹುದ್ದೆಗಳಿಗೆ ಸಂದರ್ಶನ ನಡೆಸಿದವು. ಜಿಲ್ಲೆಯ ವಿವಿಧ ಭಾಗಗಳಿಂದ ಯುವಕ-ಯುವತಿಯರು ಭಾಗವಹಿಸಿದ್ದರು. ಉದ್ಯೋಗ ಮೇಳಕ್ಕೆ ಭರ್ಜರಿ ಬೆಂಬಲ ವ್ಯಕ್ತವಾಯಿತು. ಜಿಲ್ಲಾಡಳಿತ ಅಚ್ಚುಕಟ್ಟು ವ್ಯವಸ್ಥೆ ಸಹ ಮಾಡಿತ್ತು.

# ಕೆರೆಯಲ್ಲಿ ಮುಳುಗಿ ವಿದ್ಯಾರ್ಥಿಗಳಿಬ್ಬರು ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆಯಲ್ಲಿ ಕೆರೆಯಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳು ಶನಿವಾರ ಮೃತಪಟ್ಟಿದ್ದಾರೆ.

ಮೃತರನ್ನು ಮಿಥುನ್ (17) ಮತ್ತು ಭರತ್ (17) ಎಂದು ಗುರುತಿಸಲಾಗಿದೆ. ಇಬ್ಬರೂ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದರು. ಶನಿವಾರ ಮಧ್ಯಾಹ್ನ 12.30ರ ಸಮಯದಲ್ಲಿ ಜಾನುವಾರುಗಳಿಗೆ ನೀರು ಕುಡಿಸಲು ಕೆರೆಗೆ ತೆರಳಿದ್ದ ವೇಳೆ ಕಾಲು ಜಾರಿ ನೀರಿಗೆ ಬಿದ್ದಿದ್ದಾರೆ. ಒಬ್ಬನನ್ನು ರಕ್ಷಿಸಲು ಮತ್ತೊಬ್ಬ ಮುಂದಾದಾಗ ಇಬ್ಬರೂ ಮುಳುಗಿದ್ದಾರೆ. ಅಗ್ನಿ ಶಾಮಕ ಸಿಬ್ಬಂದಿ ಕಾರ್ಯಾಚರಣೆ ಮೂಲಕ ಎರಡೂ ಶವಗಳನ್ನು ಹೊರ ತೆಗೆದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಶಾಸಕ ಸಿಮೆಂಟ್ ಮಂಜು ಅವರು ಆಸ್ಪತ್ರೆಗೆ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಂತಾಪ ಸೂಚಿಸಿದರು. ಈ ವೇಳೆ ಅಧಿಕಾರಿಗಳು ಹಾಗು ಪೊಲೀಸ್ ಇಲಾಖೆಗೆ ಶವಪರೀಕ್ಷೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿಗಳ ಸಾವು ಅತ್ಯಂತ ದು:ಖದ ವಿಚಾರ. ಮೃತ ವಿದ್ಯಾರ್ಥಿಗಳಿಬ್ಬರೂ ಕೂಲಿ ಕಾರ್ಮಿಕರ ಕುಟುಂಬಕ್ಕೆ ಸೇರಿದ್ದಾರೆ. ಕುಟುಂಬದ ಏಕೈಕ ಆಸರೆಯಾಗಿದ್ದ ಮಕ್ಕಳು ಸಾವನ್ನಪ್ಪಿರುವುದರಿಂದ ಕುಟುಂಬವೇ ಸಂಕಷ್ಟಕ್ಕೆ ಸಿಲುಕಿದೆಯೆಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದೇನೆ. ಕನಿಷ್ಠ 10 ಲಕ್ಷ ರೂ. ಪರಿಹಾರ ನೀಡುವಂತೆ ಸರ್ಕಾರವನ್ನು ಮನವಿ ಮಾಡುತ್ತೇನೆ. ಅಗತ್ಯವಿದ್ದರೆ ಈ ವಿಚಾರವನ್ನು ವಿಧಾನಸಭೆ ಅಧಿವೇಶನದಲ್ಲಿಯೂ ಪ್ರಸ್ತಾಪಿಸುತ್ತೇನೆ ಎಂದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಚ.ರಾ.ಪಟ್ಟಣದಲ್ಲಿ ಮಾ.11ಕ್ಕೆ ನಲ್ಲಿ ಕೆಲಸಗಾರರ ಸಂಘದಿಂದ ಜಾಥಾ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ವಿಶ್ವ ನಲ್ಲಿ ಕೆಲಸಗಾರರ ದಿನದ ಪ್ರಯುಕ್ತ ಮಾ.11ರಂದು ದಿನಾಚರಣೆ ಹಾಗೂ ನೀರು ಉಳಿಸಿ ಜೀವ ರಕ್ಷಿಸಿ ಎಂಬ ಶೀರ್ಷಿಕೆಯಡಿ ಜನ ಜಾಗೃತಿ ಜಾಥಾ ಹಮಿಕೊಳ್ಳಲಾಗಿದೆ ಎಂದು ತಾಲ್ಲೂಕು ನಲ್ಲಿ ಕೆಲಸಗಾರರ ಸಂಘದ ಅಧ್ಯಕ್ಷ ಆಂಥೋನಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಗೃಹ ಬಳಕೆ, ಕಟ್ಟಡ ನಿರ್ಮಾಣ, ಕೈಗಾರಿಕೆ ಕ್ಷೇತ್ರಗಳಲ್ಲಿ ನೀರಿನ ಯೋಜಿತ ಬಳಕೆಯಿಂದಾಗಿ ಸಂರಕ್ಷಿಸಬೇಕು. ಜಲ ಸಾಕ್ಷರತೆಗೆ ಮಹತ್ವ ನೀಡಬೇಕು. ವರ್ಷದಿಂದ ವರ್ಷಕ್ಕೆ ನೀರಿನ ಪ್ರಮಾಣ ಕ್ಷೀಣಿಸುತ್ತಿದೆ. ಜಲ ಜಾಗೃತಿ ಮೂಲಕ ಜೀವಜಲ ಸಂರಕ್ಷಿಸಬೇಕಾಗಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ತಾಲ್ಲೂಕು ನಲ್ಲಿ ಕೆಲಸಗಾರರ ಸಂಘದಿಂದ ವಿಶ್ವ ನಲ್ಲಿ ಕೆಲಸಗಾರರ ದಿನದಂದು ನೀರು ಉಳಿಸಿ ಜೀವ ರಕ್ಷಿಸಿ ಎಂಬ ಘೋಷ ವಾಕ್ಯದೊಂದಿಗೆ ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಭವನದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕರಪತ್ರ ಹಂಚುವ ಮೂಲಕ ಜಾಗೃತಿ ಮೂಡಿಸಲಾಗುವುದು ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಬಿಜೆಪಿ ಮುಖಂಡ ಸಿ.ಆರ್.ಚಿದಾನಂದ್, ನಲ್ಲಿ ಕೆಲಸಗಾರರ ಸಂಘದ ರಾಜ್ಯಾಧ್ಯಕ್ಷ ಮಹೇಶ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಮಿಕ ಇಲಾಖೆ ವತಿಯಿಂದ ದೊರೆಯುವ ಸೌಲಭ್ಯಗಳು, ಪಿಂಚಣಿ ಹಾಗೂ ಸದಸ್ಯರ ನೋಂದಣಿಗೆ ಮಾಹಿತಿ ನೀಡಲಾಗುವುದು. ತಾಲ್ಲೂಕಿನ ನಲ್ಲಿ ಕೆಲಸಗಾರರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು.

ಸಂಘದ ಉಪಾಧ್ಯಕ್ಷ ನಿಂಗೇಗೌಡ, ಖಜಾಂಚಿ ಲಕ್ಷ್ಮೀಶ್, ಸಹ ಕಾರ್ಯದರ್ಶಿ ಎನ್.ರಾಜು, ನಿರ್ದೇಶಕರಾದ ಸಿ.ಕೆ.ರಘು, ಸಂದೇಶ್, ಸ್ವಾಮಿ, ಅರುಣೇಶ್, ಸಿ.ಆರ್.ಮಂಜುನಾಥ್ ಇತರರಿದ್ದರು.

# ಮಾಹಿತಿ ಹಕ್ಕು-ಪತ್ರಿಕಾ ರಂಗಕ್ಕೆ ಆತ್ಮಾವಲೋಕನದ ಅಗತ್ಯವಿದೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪತ್ರಿಕೋದ್ಯಮ ಹಾಗೂ ಮಾಹಿತಿ ಹಕ್ಕು ನಿಯಮ ಎರಡೂ ಕವಲು ದಾರಿಯಲ್ಲಿದ್ದು ಆತ್ಮಾವಲೋಕನದ ಅಗತ್ಯ ಇದೆ ರಾಜ್ಯ ಮಾಹಿತಿ ಹಕ್ಕು ಆಯುಕ್ತ ರುದ್ರಣ್ಣ ಹರ್ತಿಕೋಟೆ ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿಯ ಸ್ಪಡಿ ವೀತ್ ಸೊಸೈಟಿ ಅಡಿ ಮಾಹಿತಿ ಹಕ್ಕು ಕಾಯ್ದೆ ಪರಿಣಾಮ ಹಾಗೂ ಬಳಕೆ ಬಗ್ಗೆ ಉಪನ್ಯಾಸ ನೀಡಿದರು.

ಇವರೆಡರ ಉದ್ದೇಶ ನಾಗರೀಕ ಸಬಲೀಕರಣವೇ ಆಗಿದೆ. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕೊಡುವುದು ಇವುಗಳ ಉದ್ದೇಶ. ಆದರೆ ಇವೆರಡೂ ಉದ್ದೇಶ ಮೀರಿ ಬೇರೆ ಬೇರೆ ದಾರಿಯಲ್ಲಿ ಸಾಗುತ್ತಿರುವುದು ಕಳವಳಕಾರಿ. ಹೀಗಾಗಿ ಆತಾವಲೋಕನ ಅಗತ್ಯ ಎಂದರು. ಭಯೋತ್ಪಾದನೆ, ಕೋಮುವಾದ, ಸಾಂಸ್ಕೃತಿಕ ದಿವಾಳಿತನ ಸಂದರ್ಭದಲ್ಲಿ

ನಾವು ನಮ ಕೆಲಸ ಮಾಡುತ್ತಿಲ್ಲ, ಇಚ್ಛಾಶಕ್ತಿ ಎಚ್ಚರಿಸುತ್ತಿಲ್ಲ, ಅಧಿಕಾರಿಗಳಿಗೆ ಮಾಹಿತಿ ಕೊಡುವ ಕೆಲಸ ಆಗಬೇಕು ಎಂದು ನುಡಿದರು.

ಹೆಚ್ಚು ಮಾಧ್ಯಮಗಳು ಇಂದು




ಬಂಡವಾಳ ಶಾಹಿಗಳ ಹಿಡಿತದಲ್ಲಿವೆ, ಆದರೂ ನಾವು ಸಾಮಾಜಿಕ ಹೊಣೆಗಾರಿಕೆ ಬಿಡಬಾರದು. ನಾವು ಸುಳ್ಳು-ಸತ್ಯ ನಡುವೆ ಪರಿಶೀಲನೆ ಮಾಡುತ್ತಿಲ್ಲ. ದಿನದಿಂದ ದಿನಕ್ಕೆ ನೈತಿಕತೆ ಕಳೆದು ಕೊಳ್ಳುತ್ತಿದ್ದೇವೆ. ಹಿಂದೆ ಗೌರವ ಡಾಕ್ಟರೇಟ್ ಮಾರಾಟ ಮಾಡುತ್ತಿದ್ದುದರ ಬಗ್ಗೆ ಟೀಕೆ ಮಾಡುತ್ತಿದ್ದವು. ಈಗ ಮೀಡಿಯಾ ಪ್ರಶಸ್ತಿ ಮಾರುವ ಹಂತಕ್ಕೆ ಇಳಿದರೆ ನೈತಿಕತೆ ಎಲ್ಲಿ ಉಳಿಯಲಿದೆ ಎಂದು ಪ್ರಶ್ನಿಸಿದರು.

ಮತ್ತೊಬ್ಬ ಆಯುಕ್ತ ಕೆ. ಬದ್ರುದ್ದೀನ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪ್ರಶ್ನೆ, ಅನುಮಾನ ಇರಬೇಕು. ಹಿಂದೆ ಪತ್ರಿಕೋದ್ಯಮ ಕಷ್ಟ ಇತ್ತು. ಈಗ ತಂತ್ರಜ್ಞಾನದ ಕಾರಣಕ್ಕೆ ಸುಲಭವಾಗಿದೆ. ಆದರೂ ನಿರಂತರ ಅಧ್ಯಯನ, ಓದುವುದು ಕಲಿಯೋದು ನಿತ್ಯ ನಿರಂತರ, ಭ್ರಮಾಲೋಕ ಬೇಡ, ನಿರಂತರ ವಿದ್ಯಾರ್ಥಿಗಳು, ನಿತ್ಯ ಕಲಿಕೆ, ಭೂತಕಾಲದ ಅಧ್ಯಯನ ಬೇಕು, ಓದಿದರೆ ವೃತ್ತಿಗೆ ಗೌರವ ಬರಲಿದೆ ಎಂದು ನುಡಿದರು.

ಸ್ಪಡಿ ವಿತ್ ಸೊಸೈಟಿ ಅದ್ಭುತ ಪರಿಕಲ್ಪನೆ, ಮಾಹಿತಿ ಹಕ್ಕು ದೇಶದಲ್ಲಿ ಜಾರಿಗೆ ಬಂದು 20 ವರ್ಷ ಆಗಿದೆ. ಆದರೆ ಇದಕ್ಕೆ 250 ವರ್ಷಗಳ ಇತಿಹಾಸ ಇದೆ. 1766 ರಲ್ಲಿ ಮೊದಲಿಗೆ ಸ್ವೀಡನ್‌ನಲ್ಲಿ ಅನುಷ್ಠಾನಕ್ಕೆ ಬಂತು. ಈಗ 130 ರಾಷ್ಟ್ರಗಳಲ್ಲಿ ಜಾರಿಯಲ್ಲಿದೆ ಎಂದರು.

ಸರ್ಕಾರದ ಯಾವುದೇ ನಿರ್ಣಯ ನೇರವಾಗಿ ಪ್ರಜೆಗಳ ಮೇಲೆ ಆಗಲಿದೆ. ಅನುಭವಿಸುವವರಿಗೆ ಸ್ವರೂಪ ತಿಳಿಯುವುದೇ ಮಾಹಿತಿ ಹಕ್ಕನಿಂದ ಎಂದ ಅವರು, ಸರ್ಕಾರದ ನಿರ್ಧಾರಗಳು ಪಾರದರ್ಶಕವಾಗಿ, ಜನರಿಗೆ ಉತ್ತರದಾಯಿತ್ವ ಆಗಿರಬೇಕು. ಭ್ರಷ್ಟಾಚಾರ ಮುಕ್ತವಾಗಿರಬೇಕು ಎಂಬುದು ಮಾಹಿತಿ ಹಕ್ಕು ಉದ್ದೇಶ. ಜನರ ಕೈಗೆ ಇದೊಂದು ಬ್ರಹ್ಮಾಸ್ತ್ರ ಇದ್ದ ಹಾಗೆ ಎಂದರು.

ಕೆಯೂಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷ ಎಚ್.ಬಿ.ಮದನಗೌಡ ಮಾತನಾಡಿ, ರುದ್ರಣ್ಣ ಹರ್ತಿಕೋಟೆ ಹಾಗೂ ಬದ್ರುದ್ದೀನ್ ವೃತ್ತಿ ಘನತೆ ಎತ್ತಿ ಹಿಡಿದವರು. ಇಬ್ಬರೂ ಕರ್ನಾಟಕ ಪತ್ರಿಕೋದ್ಯಮದಲ್ಲಿ ಒಳ್ಳೆಯ ಹೆಸರು ಮಾಡಿದ್ದಾರೆ. ವೃತ್ತಿಗೆ ಕಳಂಕ ತರದ ರೀತಿ, ಗೌರವಯುತವಾಗಿ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರಸನ್ನ ಕುಮಾರ್(ಚಲಂ), ಪತ್ರಕರ್ತರು, ಸಂಘದ ಪದಾಧಿಕಾರಿಗಳು ಇದ್ದರು.

ಜಿಲ್ಲಾ ಕಾರ್ಯಕಾರಿ ಹಾಗೂ ಸಾಂಸ್ಕೃತಿಕ ಸಮಿತಿ ಸದಸ್ಯ ಸಿ.ಆರ್.ನವೀನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿಂದೂ ಪ್ರಕಾಶ್ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಹಾಗೂ ಸಾಂಸ್ಕೃತಿಕ ಸಮಿತಿ ಸದಸ್ಯ ಬಿ.ಆರ್.ಬೊಮ್ಮೇಗೌಡ ನಿರೂಪಿಸಿದರು.

# ಆನಂದ ಅನುಭೂತಿ ಸಮಾರೋಪ ಸಮಾರಂಭ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮಲೆನಾಡು ತಾಂತ್ರಿಕ ಕಾಲೇಜಿನಲ್ಲಿ ಆರ್ಟ್ ಆಫ್ ಲಿವಿಂಗ್ ಮತ್ತು ಹಾಸನ ಲಯನ್ಸ್‌ಕ್ಲಬ್ ವತಿಯಿಂದ ಮಾ. 2 ರಿಂದ 7ರ ವರೆಗೆ ಹಮಿಕೊಂಡಿದ್ದ ಆನಂದ ಅನುಭೂತಿ ಶಿಬಿರ ಸಮಾರೋಪ ಸಮಾರಂಭ ಶನಿವಾರ ನೆರವೇರಿತು.

ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ಪ್ರತಿನಿಧಿ ಪ್ರಿಯದರ್ಶಿನಿ ಮಾತನಾಡಿ, ಮನಸ್ಸು ಸದಾ ಸಂತೋಷವಾಗಿರಬೇಕೆಂದರೆ ಯೋಗ, ಧ್ಯಾನ ಮತ್ತು ಆತ್ಮಶಾಂತಿ ಅತ್ಯವಶ್ಯಕವಾಗಿದೆ. ಆರೋಗ್ಯಕ್ಕಾಗಿ ದಿನದ ಒಂದು ಗಂಟೆ ಮೀಸಲಿಡಬೇಕು. ಸಾಧು ಸಂತರು ಮಾನಸಿಕ ಶಾಂತಿ ಮತ್ತು ಸಂತೋಷಕ್ಕಾಗಿ ವಿವಿಧ ಆಧ್ಯಾತಿಕ ಮಾರ್ಗಗಳನ್ನು ಅನುಸರಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಜನರು ಅತಿಯಾದ ಒತ್ತಡ ಮತ್ತು ಆತಂಕದಿಂದ ಜೀವನ ನಡೆಸುತ್ತಿರುವುದರಿಂದ ಸಂತೋಷ ಕಡಿಮೆಯಾಗುತ್ತಿದೆ. ಮಾನಸಿಕ ಸಂತೋಷವನ್ನು ಪುನಃ ಪಡೆಯುವ ಅಗತ್ಯವಿದೆ ಎಂದು ಹೇಳಿದರು.

ಯೋಗವು ದೇಹದ ಆರೋಗ್ಯವನ್ನು ಕಾಪಾಡಲು ಸಹಕಾರಿಯಾದರೆ ಧ್ಯಾನ ಮತ್ತು ಸುದರ್ಶನ ಕ್ರಿಯೆಯು ಮನಸ್ಸನ್ನು ಒತ್ತಡದಿಂದ ಮುಕ್ತಗೊಳಿಸಿ ರೋಗಮುಕ್ತ ದೇಹ ನೀಡುತ್ತದೆ. ಅವುಗಳ ಮೂಲಕ ಮಾನಸಿಕ ಆರೋಗ್ಯವೂ ಉತ್ತಮವಾಗಿರುತ್ತದೆ. ಪ್ರತಿದಿನ ಹಲ್ಲುಜ್ಜುವುದು, ಸ್ನಾನ ಮಾಡುವಂತಹ ಸರಳ ದೈನಂದಿನ ಅಭ್ಯಾಸಗಳೂ ಮನಸ್ಸಿನ ಆರೋಗ್ಯಕ್ಕೆ ಸಹಕಾರಿಯಾಗುತ್ತವೆ. ಯಾವ ಕೆಲಸ ಮಾಡಿದರೂ ಅದನ್ನು ಸಕಾರಾತ್ಮಕ ಮನೋಭಾವದಿಂದ ಮಾಡಿದರೆ ನಮಗೆ ಹೊಸ ಶಕ್ತಿ ಮತ್ತು ಉತ್ಸಾಹ ಬರುತ್ತದೆ. ಮನಸ್ಸಿನ ರಕ್ಷಣೆಗೆ ಪ್ರತಿದಿನ ಸ್ವಲ್ಪ ಸಮಯ ಯೋಗ, ಧ್ಯಾನ ಮತ್ತು ಸತ್ಸಂಗದಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡವಳ್ಳಿ ಮಾತನಾಡಿ, ಸಮಾಜದಲ್ಲಿ ಎಲ್ಲರೂ ಸಮಾನರು. ಯೋಗ ಮತ್ತು ಧ್ಯಾನವು ಮನುಷ್ಯನ ಆರೋಗ್ಯ ಹಾಗೂ ಮನಸ್ಸಿನ ಸಮತೋಲನ ಕಾಪಾಡಲು ಸಹಕಾರಿಯಾಗುತ್ತದೆ. ಈ ಶಿಬಿರವು ಎಲ್ಲರಿಗೂ ಉಪಯುಕ್ತವಾಗಿದ್ದು, ಹಾಸನ ಲಯನ್ಸ್ ಕ್ಲಬ್ ಕಾರ್ಯಕ್ರಮಕ್ಕೆ ಮಹತ್ವದ ಬೆಂಬಲ ನೀಡಿದೆಯೆಂದರು.

ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿ.ಶಿವಸ್ವಾಮಿ ಮಾತನಾಡಿ, ಹಾಸನ ಲಯನ್ಸ್ ಸೇವಾ ಕೇಂದ್ರದಲ್ಲಿ ವಿವಿಧ ಸೇವಾ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಸಮಾಜದ ಒಳಿತಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮಿಕೊಳ್ಳಲಾಗುತ್ತಿದ್ದು, ಯೋಗ ಮತ್ತು ಧ್ಯಾನ ಶಿಬಿರವೂ ಅವುಗಳಲ್ಲಿ ಒಂದಾಗಿದೆ. ಇದು ಯಶಸ್ವಿಯಾಗಿ ನೆರವೇರಿರುವುದು ಸಂತೋಷದ ಸಂಗತಿ ಎಂದರು.

ನಗರಸಭೆ ನಿವೃತ್ತ ಆಯುಕ್ತ ಪರಮೇಶ್, ಆರ್ಟ್ ಆಫ್ ಲೀವಿಂಗ್ ಫೌಂಡೇಶನ್ ಶಿಕ್ಷಕ ಜಿ.ಎ. ಸುಬ್ಬುಕೃಷ್ಣ, ಹೆಚ್.ಎಲ್.ವಿದ್ಯಾ, ರೂಪ, ಶಿಕ್ಷಕಿ ಹೆಚ್.ವೇದಶ್ರೀ, ಪ್ರಿಯಾ, ಸಿಂಚನಾ, ಶಿಲ್ಪಾ, ಖಜಾಂಚಿ ಚನ್ನೇಗೌಡ, ವಲಯ ಅಧ್ಯಕ್ಷ ಹೆಚ್.ಕೆ.ನಾಗೇಶ್, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಖಜಾಂಚಿ ಪಾರ್ಶ್ವನಾಥ್, ಮಲೆನಾಡು ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಇತರರು ಹಾಜರಿದ್ದರು.

# ದ್ವೇಷ ರಾಜಕೀಯದ ವಿರುದ್ಧ ಮಹಿಳಾ ಚಳವಳಿ ಬಲಗೊಳ್ಳಲಿ

## ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ | ಅಂತಾರಾಷ್ಟ್ರೀಯ ಮಹಿಳಾ ದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೇಶಾದ್ಯಂತ ದ್ವೇಷ ರಾಜಕಾರಣ ಮೇಳೈಸುತ್ತಿದ್ದು ಅದರ ವಿರುದ್ಧ ಮಹಿಳಾ ಚಳವಳಿ ಬಲಗೊಳ್ಳಬೇಕಿದೆ ಎಂದು ನಾಗರಿಕ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ದೌರ್ಜನ್ಯ ವಿರೋಧಿ ಒಕ್ಕೂಟ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಮಹಿಳಾ ಚಳವಳಿ ಹಲವು ಸವಾಲುಗಳನ್ನು ಎದುರಿಸುತ್ತಿದೆ. ದಲಿತ ಹಾಗೂ ಮುಸ್ಲಿಂ ಮಹಿಳೆಯರ ಮೇಲೆ ಅವಮಾನಕಾರಿ ನಡೆಗಳು ಹೆಚ್ಚುತ್ತಿವೆ. ಹಿಂದುತ್ವದ ಹೆಸರಿನಲ್ಲಿ ಮಾತನಾಡುವವರು ಮನೆ ಕೆಲಸಗಾರರು ಹಾಗೂ ಸ್ವಚ್ಛತಾ ಕಾರ್ಮಿಕರನ್ನು ನಿಜವಾಗಿಯೂ ಗೌರವದಿಂದ ನೋಡಿಕೊಳ್ಳುತ್ತಾರೆಯೇ ಎಂದು ಪ್ರಶ್ನಿಸಿದರು.

ಜಾತಿ ಹೆಸರಿನಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಮೇಲೂ ದಾಳಿಗಳು ನಡೆಯುತ್ತಿವೆ. ಜಾಗತಿಕ ಮಟ್ಟದಲ್ಲಿಯೂ ಯುದ್ಧ ಹಾಗೂ ಸಾಮ್ರಾಜ್ಯಶಾಹಿ ರಾಜಕೀಯದ ಪರಿಣಾಮವಾಗಿ ಸಾಮಾನ್ಯ ಜನರು, ವಿಶೇಷವಾಗಿ



ಮಕ್ಕಳು ಬಲಿಯಾಗುತ್ತಿರುವುದು ದುಃಖಕರ ಸಂಗತಿ ಎಂದು ಹೇಳಿದರು.

ರಂಜಾನ್ ಸಂದರ್ಭದಲ್ಲಿ ಮುಸ್ಲಿಂ ವ್ಯಕ್ತಿಯೊಬ್ಬನ ಹತ್ಯೆ ನಡೆದಿರುವ ಘಟನೆ ಉಲ್ಲೇಖಿಸಿ, ಇಂತಹ ದ್ವೇಷಪರ ಘಟನೆಗಳ ವಿರುದ್ಧ ಮಹಿಳಾ ಚಳುವಳಿಗಳು ದೃಢವಾಗಿ ಹೋರಾಟ ಕಟ್ಟಬೇಕು ಎಂದು ಕರೆ ನೀಡಿದರು.

ಸಿಎಎ ಮತ್ತು ಎನ್‌ಆರ್‌ಸಿ ಜಾರಿಗೆ ತಂದ ಸಂದರ್ಭದಲ್ಲಿಯೇ ಪ್ರಶ್ನೆ ಎತ್ತಿದವರ ಮೇಲೆ ದೇಶದ್ರೋಹ ಹಾಗೂ ಯುಎಪಿಎ ಪ್ರಕರಣಗಳನ್ನು ದಾಖಲಿಸಲಾಯಿತು. ಆದರೆ ಸಾವಿರಾರು ಮುಸ್ಲಿಂ ಮಹಿಳೆಯರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಎಲ್ಲ ದಿಕ್ಕುಗಳಿಂದ ಚಳವಳಿ ಕುಂಠಿತಗೊಳಿಸಲು ಮೋದಿ ಸರ್ಕಾರ ಪ್ರಯತ್ನಿಸಿತು. ಆದರೆ ಚಳವಳಿ ಬಲವಾಗಿದ್ದ ಕಾರಣ ಅವರ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಇದು ಜನಚಳವಳಿಯ ತಾಕತ್ತಿಗೆ ಉದಾಹರಣೆ ಎಂದು ಹೇಳಿದರು.

ಮಾಧ್ಯಮಗಳು ಕಾರ್ಪೊರೇಟೀಕರಣಗೊಂಡಿರುವ ಹಿನ್ನೆಲೆಯಲ್ಲಿ ಸಮಾಜದ ಅಲ್ಪಸಂಖ್ಯಾತರ ಪ್ರಶ್ನೆಗಳು ಹಿಮ್ಮೆಟ್ಟುತ್ತಿವೆ. ಕೆಲವು ಮಾಧ್ಯಮಗಳು ಮುಸ್ಲಿಂ ಮಹಿಳೆಯರನ್ನು ತಪ್ಪಾಗಿ ಚಿತ್ರಿಸುವ ಮೂಲಕ ಸಮಾಜದಲ್ಲಿ ತಪ್ಪು ಕಲ್ಪನೆಗಳನ್ನು ಬಿತ್ತುತ್ತಿವೆ. ದಲಿತ, ಆದಿವಾಸಿ, ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಮುಸ್ಲಿಂ ಸಮುದಾಯದ ಹಕ್ಕುಗಳನ್ನು ದಾಖಲೆಗಳ ಹೆಸರಿನಲ್ಲಿ ಕಡಿತಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಮಹಿಳೆಯರ ಮತದಾನದ ಹಕ್ಕಿಗೂ ಇಂತಹ ನೆಪಗಳಿಂದ ಧಕ್ಕೆ ತರುವ ಸಾಧ್ಯತೆ ಇದೆ. ಕರ್ನಾಟಕದಲ್ಲೂ ಈ ಅಪಾಯ ಎದುರಾಗಬಹುದು ಎಂದು ಎಚ್ಚರಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ ಮಾತನಾಡಿ, ಮಹಿಳೆಯರು ಸ್ವತಂತ್ರವಾಗಿ ದುಡಿಯಲು ಮತ್ತು ಪ್ರಶ್ನಿಸಲು ಮನರೇಗಾ ಯೋಜನೆ ದೊಡ್ಡ ಮಾನಸಿಕ ಬಲ ನೀಡಿತ್ತು ಎಂದು ಹೇಳಿದರು. ಎಡಪಕ್ಷಗಳ ಹೋರಾಟದ ಫಲವಾಗಿ ಜಾರಿಯಾದ ಈ ಯೋಜನೆ ಗ್ರಾಮೀಣ ಮಹಿಳೆಯರ ಆರ್ಥಿಕ ಬಲವರ್ಧನೆಗೆ ಕಾರಣವಾಗಿತ್ತು. ಆದರೆ ಈಗ ವಿವಿಧ ಹೆಸರಿನಲ್ಲಿ ಈ ಯೋಜನೆಯ ಮೂಲ ಉದ್ದೇಶವನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದರು. ಮನರೇಗಾ ಯೋಜನೆ ತನ್ನ ಮೂಲ ಸ್ವರೂಪದಲ್ಲಿಯೇ ಮುಂದುವರಿಯಬೇಕು ಎಂದು ಒತ್ತಾಯಿಸಿದರು.

ಸಾಹಿತಿ ಡಾ. ಸಬಿತಾ ಬನ್ನಾಡಿ ಮಾತನಾಡಿ, ಸಾವಿರ ತಲೆ-ಕೈಕಾಲುಗಳಿರುವ ದೌರ್ಜನ್ಯಗಳನ್ನು ಎದುರಿಸಲು ಪದೇಪದೇ ಅವತಾರ ಪುರುಷರೇ ಯಾಕೆ ಬರಬೇಕು. ನಾವು ರಾಮ ಅಥವಾ ಕೃಷ್ಣರಂತೆ ದೌರ್ಜನ್ಯಕಾರರನ್ನು ಕೊಲ್ಲುವುದಿಲ್ಲ. ಬದಲಿಗೆ ದೌರ್ಜನ್ಯ ಎಸಗುವ ಕೈಗಳನ್ನು ಸೋಲಿಸುವುದು ಮತ್ತು ಮನಸ್ಥಿತಿಗಳನ್ನು ಬದಲಿಸುವುದರ ಮೂಲಕವೇ ನಾವು ಜಯ ಸಾಧಿಸುತ್ತೇವೆ. ಹೀಗೆ ಇತಿಹಾಸವನ್ನು ಬರೆಯುತ್ತೇವೆ ಎಂದರು.

ಡಾ. ಎಚ್.ಎಸ್. ಅನುಪಮ ಮಾತನಾಡಿ, ತಮ ಮೇಲೆ ನಡೆದ ಲೈಂಗಿಕ ದೌರ್ಜನ್ಯಕ್ಕೆ ವಿರುದ್ಧವಾಗಿ ಹೋರಾಡಿ ನ್ಯಾಯ ಪಡೆದ ಬಿಲ್ಕಿಸ್ ಬಾನು, ದಿಟ್ಟ ಪತ್ರಕರ್ತೆ ತೀಸ್ತಾ ಸೆಟಲ್ವಾಡ್, ಹೋರಾಟಗಾರ್ತಿಯರಾದ ಮೇಧಾ ಪಾಟ್ಕರ್ ಹಾಗೂ ಜಕೀಯಾ ಸೋಮನ ಅವರಂತಹ ಮಹಿಳೆಯರು ಸಮಾಜಕ್ಕೆ ಮಾದರಿಯಾಗಿದ್ದಾರೆಂದು ಹೇಳಿದರು.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಸ್ವಚ್ಛತೆ ಕಾಪಾಡಲು ಪ್ರತಿ ನಾಗರಿಕರು ಸಹಕರಿಸಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಪಟ್ಟಣವನ್ನು ಸ್ವಚ್ಛವಾಗಿಡಲು ಪುರಸಭೆಯೊಂದಿಗೆ ನಾಗರಿಕರೂ ಕೈ ಜೋಡಿಸಬೇಕು ಮತ್ತು ತಮ ಮನೆಗಳಲ್ಲಿಯೇ ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡಬೇಕೆಂದು ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಮನವಿ ಮಾಡಿದರು.

ಪುರಸಭೆ ವತಿಯಿಂದ ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಸ್ವಚ್ಛತಾ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಮತ್ತು ಬಟ್ಟೆ ಚೀಲಗಳ ಬಳಕೆಯನ್ನು ಉತ್ತೇಜಿಸುವ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಪುರಸಭೆಯಿಂದ ಪ್ರತಿದಿನವೂ ಕಸ ಸಂಗ್ರಹಿಸಲು ವಾಹನಗಳು ಮನೆ ಮನೆಗೆ ಬರುತ್ತಿದ್ದು, ರಸ್ತೆಯ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ಮೊದಲು ಬಿಡಬೇಕು ಎಂದು ಮನವಿ ಮಾಡಿದರು.

ಮೂಡಿಗೆರೆ ರಸ್ತೆಯ ಕೆಲವು ಪ್ರದೇಶಗಳಲ್ಲಿ ಕಸದ ರಾಶಿಗಳು ಕಾಣಿಸುತ್ತಿರುವುದು ಆತಂಕಕಾರಿ ವಿಷಯವಾಗಿದೆ.

ವಿಶೇಷವಾಗಿ ಅಂಗಡಿ ಮುಂಗಟ್ಟುಗಳವರು ಪ್ಲಾಸ್ಟಿಕ್ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ, ಬಟ್ಟೆ ಚೀಲಗಳ ಬಳಕೆಗೆ ಪ್ರಾಮುಖ್ಯತೆ ನೀಡಬೇಕು ಎಂದು ಅವರು ತಿಳಿಸಿದರು.

ನಗರವನ್ನು ಸ್ವಚ್ಛ, ಸುಂದರ ಹಾಗೂ ಆರೋಗ್ಯಕರವಾಗಿಡಲು ಪುರಸಭೆ ಮಾತ್ರವಲ್ಲದೆ ಎಲ್ಲಾ ನಾಗರಿಕರೂ ಸಹಕರಿಸಬೇಕು. ಇದಲ್ಲದೆ ಸಾರ್ವಜನಿಕರಲ್ಲಿ ಶೌಚಾಲಯಗಳ ಬಳಕೆಯ ಕುರಿತು ಸಹ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ. ಅದರಂತೆ ಮೂಡಿಗೆರೆ ರಸ್ತೆ, ಹರ್ಡೀಕರ್ ವೃತ್ತ, ಕೆಂಪೇಗೌಡ ಸರ್ಕಲ್ ಹಾಗೂ ಚನ್ನಕೇಶವ ದೇವಸ್ಥಾನ ಮುಂಭಾಗದಲ್ಲಿ ಸಾರ್ವಜನಿಕರಿಗೆ ಇದರ ಬಗ್ಗೆ ಜಾಗೃತಿ ಹಾಗೂ ಅರಿವು ಮೂಡಿಸಲಾಗುತ್ತದೆ ಎಂದು ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜ್ ಟಾಕಪ್ಪ ಶಿಗ್ಗಾವಿ ಮಾತನಾಡಿ, ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಸ್ವಚ್ಛತಾ ಚಟುವಟಿಕೆಗಳ ಭಾಗವಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮ ಹಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಬೇಲೂರು ಪಟ್ಟಣದ ಶಾಲಾ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮಗಳ ಉದ್ದೇಶ ಮತ್ತು ಸಂದೇಶವು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಬೇಕು. ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ನೀಡುವ ಪದ್ಧತಿ ಸಾರ್ವಜನಿಕರಲ್ಲಿ ಸಂಪೂರ್ಣವಾಗಿ ರೂಢಿಯಾಗುವವರೆಗೆ ಸ್ವಚ್ಛತಾ ಕಾರ್ಯಗಳು ಪರಿಣಾಮಕಾರಿಯಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಸಾರ್ವಜನಿಕರು ದಿನನಿತ್ಯದ ಕೆಲಸಗಳ ಜೊತೆಗೆ ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನೂ ಹೊತ್ತುಕೊಳ್ಳಬೇಕು. ಮನೆಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳನ್ನು ಹಸಿ ಕಸ ಮತ್ತು ಒಣ ಕಸವಾಗಿ ವಿಂಗಡಿಸಿ ನೀಡುವುದರಿಂದ ಪುರಸಭೆಗೆ ಕಸ ನಿರ್ವಹಣೆ ಸುಲಭವಾಗುವುದರ ಜೊತೆಗೆ ಸಾರ್ವಜನಿಕರಿಗೂ ಸಹ ಆರೋಗ್ಯಕರ ವಾತಾವರಣ ನಿರ್ಮಾಣವಾಗುತ್ತದೆ.

ಪುರಸಭೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗು ಪುರಸಭೆ ಅಧಿಕಾರಿಗಳು ಸಿಬ್ಬಂದಿಗಳ ಜೊತೆಗೂಡಿ ಸಾರ್ವಜನಿಕರಿಗೆ ಕಸ ವಿಂಗಡಣೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಮತ್ತು ಸ್ವಚ್ಛತೆಯ ಮಹತ್ವದ ಕುರಿತು ಅರಿವು ಮೂಡಿಸಲಾಯಿತು.

ಆರೋಗ್ಯಾಧಿಕಾರಿ ಲೋಹಿತ್, ವೈಡಿಡಿ ಕಾಲೇಜಿನ ಉಪನ್ಯಾಸಕರಾದ ಬಾಬು ಪ್ರಸಾದ್, ವೀರಭದ್ರಪ್ಪ, ಸುಮಂತ್ ಕುಮಾರ್ ಇತರರು ಹಾಜರಿದ್ದರು.

# ಜೈನರ ಗುತ್ತಿ ಕ್ಷೇತ್ರಕ್ಕೆ ಜೈನ ಮುನಿ ಆಗಮನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಳೇಬೀಡು: ಜೈನರಗುತ್ತಿ ಕ್ಷೇತ್ರಕ್ಕೆ ಜೈನ ಮುನಿ ವೀರಸಾಗರ ಮುನಿ ಮಹಾರಾಜರು ಆಗಮಿಸಿದರು. ಮಹಾರಾಷ್ಟ್ರದಿಂದ 600 ಕಿ.ಮೀ ಪಾದಯಾತ್ರೆಯಲ್ಲಿ ಅವರು ಜೈನರ ಗುತ್ತಿಗೆ ಆಗಮಿಸಿದರು. ಅವರನ್ನು ವಾದ್ಯಗೋಷ್ಠಿ ಹಾಗೂ ಕಳಸಗಳೊಂದಿಗೆ ಅವರನ್ನು ಭವ್ಯವಾಗಿ ಸ್ವಾಗತಿಸಲಾಯಿತು. ಮೆರವಣಿಗೆಯಲ್ಲಿ ಭಕ್ತರ ಘೋಷಣೆ ಮೊಳಗಿತ್ತು. ಸಿಂಗರಿಸಿದ್ದ ಜೋಡಿ ಹೋರಿಗಳು ಮೆರವಣಿಗೆಗೆ ಕಳೆ ನೀಡಿತು. 108 ತಟ್ಟೆಗಳ ಮೇಲೆ ಮುನಿಗಳನ್ನು ನಡೆಸಿಕೊಂಡು ಬರಲಾಯಿತು. ಕಳೆದ ವರ್ಷ ಜೈನರಗುತ್ತಿ ಕ್ಷೇತ್ರದಲ್ಲಿ ಬೃಹತ್ ಪಂಚಕಲ್ಯಾಣ ಹಾಗೂ 24 ಅಡಿ ಎತ್ತರದ ಪದಾಸನ ಭಂಗಿಯ ಶೀಥಲನಾಥ ತೀರ್ಥಂಕರ ಮೂರ್ತಿಯ ಪ್ರತಿಷ್ಠಾಪನೆ ನೆರವೇರಿಸಿದ ನಂತರ ವೀರಸಾಗರ ಮುನಿಮಹಾರಾಜರು ವಿಹಾರ ಕೈಗೊಂಡಿದ್ದರು. ಮಹಾರಾಷ್ಟ್ರದ ಜೇಸಿಂಗಪುರ ಪೋತಳಿಗೆ 600 ಕಿ.ಮೀ ಕಾಲ್ನಡಿಗೆಯಲ್ಲಿ ತೆರಳಿದ್ದರು. ಪುನಃ ಈಗ 600ಕಿ.ಮಿ ಜೈನರ ಗುತ್ತಿಗೆ ಹಿಂದಿರುಗಿದ್ದಾರೆ. ಬೇರೆ ಕ್ಷೇತ್ರ ವಿಹಾರ ಸೇರಿ 1800ಕಿ.ಮೀ ವಿಹಾರ ಮಾಡಿದ್ದಾರೆ.

ಅವರಿಗೆ ದೀಕ್ಷೆಯಾಗಿ 16ವರ್ಷ ಕಳೆದಿದೆ ಅಂದಾಜು 20000 ಕಿ.ಮೀ ಪಾದಯಾತ್ರೆ ನಡೆಸಿದ್ದಾರೆ ಎಂದು ಜೈನರಗುತ್ತಿ ಟ್ರಸ್ಟ್ ಅಧ್ಯಕ್ಷ ಅಡಗೂರು ಶಶಿಕುಮಾರ್ ಹೇಳಿದರು.

ಜೈನ ಮುನಿಗಳು ಮಾನವರು ಮಾತ್ರವಲ್ಲ ಸಕಲ ಜೀವಿಗಳ ಶ್ರೇಯಸ್ಸುಬಯಸುತ್ತಾರೆ. ಎಲ್ಲರನ್ನೂ ಒಗ್ಗೂಡಿಸಿಕೊಂಡು ಕ್ಷೇತ್ರದ ಅಭಿವೃದ್ಧಿ ಮಾಡುತ್ತಿದ್ದೇವೆ ಎಂದು ವೀರಸಾಗರ ಮುನಿ ಮಹಾರಾಜ್ ಹೇಳಿದರು.

ಜೈನರಗುತ್ತಿ ಟ್ರಸ್ಟ್ ಅಧ್ಯಕ್ಷ ಶಶಿಕುಮಾರ್, ಕಾರ್ಯದರ್ಶಿ ಬ್ರಹಪಾಲ ಜೈನ್, ನಿರ್ದೇಶಕರಾದ ದೇವೇಂದ್ರ, ಹೊಂಗೇರಿ, ಪದಿಣಿ, ನಾಗಶ್ರೀ, ಮುಪ್ಪಾನೆ, ನಾಗೇಂದ್ರ ಪ್ರಸಾದ್, ಧವನ್ ಜೈನ್, ಜಯೇಂದ್ರ ಕುಮಾರ್, ಜಿನೇಂದ್ರ ಬಾಬು, ಕೀರ್ತಿಕುಮಾರ್, ನಾಗಚಂದ್ರ, ಜೈನ ಮಂಡಳಿ ಸಹಕಾರ ಸಂಘದ ಅಧ್ಯಕ್ಷ ಸುಕುಮಾರ್, ಮುಖಂಡರಾದ ಹಾಸನದ ಪಾರ್ಶ್ವನಾಥ, ಎಚ್.ವೈ.ರತ್ನರಾಜು, ಅರ್ಚಕ ಶೀತಲ ಪಂಡಿತ್ ಪಾಲ್ಗೊಂಡಿದ್ದರು.

# ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ಮೌನ ಮೆರವಣಿಗೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ಮೇಣದ ಬತ್ತಿ ಹಿಡಿದು ಪಟ್ಟಣದಲ್ಲಿ ಮೌನ ಮೆರವಣಿಗೆ ನಡೆಸಲಾಯಿತು.

ಒಕ್ಕೂಟದ ಜಿಲ್ಲಾ ಗೌರವ ಅಧ್ಯಕ್ಷೆ ಡಾ.ಸಾವಿತ್ರಿ ಮಾತನಾಡಿ, ಇದೇ ಮೊದಲ ಬಾರಿಗೆ ಒಕ್ಕೂಟ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹಾಸನದ ಕಲಾಭವನದಲ್ಲಿ ಮಾ.8ರಂದು ಆಯೋಜನೆ ಮಾಡಲಾಗಿದೆ. ಈ ಸಲುವಾಗಿ ಇಡೀ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮಹಿಳೆಯರನ್ನು ಸಂಘಟಿಸಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ನ್ಯಾಯ ದಕ್ಕುವ ತನಕ ಹೋರಾಟವನ್ನುಮುಂದುವರಿಸುವುದು ನಮ ಮೂಲ ಆಶಯವಾಗಿದೆ. ಈ ಸಲುವಾಗಿ ಮಹಿಳೆಯರು ಕಪ್ಪು ಬಟ್ಟೆ ಧರಿಸಿ ಬೆಳಕಿನ ಮೆರವಣಿಗೆ ನಡೆಸಿದ್ದಾರೆ. ಅಲ್ಲದೆ ಮಾ.8ರಂದು ಹಮಿಕೊಂಡಿರುವ ಮಹಿಳಾ ದಿನಾಚರಣೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಮಹಿಳೆಯರಲ್ಲಿನ ಪ್ರತಿಭೆಗೆ ಒತ್ತುನೀಡುವ ಕೆಲಸ ಇನ್ನೂ ಹೆಚ್ಚು ಆಗಬೇಕಿದೆ. ಕೇವಲ ಮಹಿಳೆಯರು, ಹೆಣ್ಣುಮಕ್ಕಳು ಧರಿಸುವ ಬಟ್ಟೆಯಿಂದ ಅವರ ವ್ಯಕ್ತಿತ್ವವನ್ನು ಅವಲೋಕಿಸಬಾರದು. ಇದು ಕೂಡ ಒಂದು ರೀತಿಯಲ್ಲಿ ಶೋಷಣೆಯಾಗಿ ಕಂಡುಬರುತ್ತದೆ. ಸಮಾಜದಲ್ಲಿ ಪುರುಷರಷ್ಟೇ ಮಹಿಳೆಯರಿಗೂ ಸರಿಸಮಾನವಾದ ಹಕ್ಕು,ಅವಕಾಶಗಳಿದ್ದು,ಇವುಗಳನ್ನು ಪಡೆದುಕೊಂಡು ಸ್ವಾವಲಂಬಿಗಳಾಗಿ ದೇಶದ ಅಭಿವೃದ್ಧಿಗೆ ಶ್ರಮಿಸಬೇಕೆಂಬುದೇ ಒಕ್ಕೂಟದ ಮೂಲ ಮಂತ್ರವಾಗಿದೆ ಎಂದು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ ಮಾತನಾಡಿ, ನಿತ್ಯವೂ ಕೂಡ ನಾವು ಕೆಲಸ ಮಾಡುವ ಸ್ಥಳಗಳಲ್ಲಿಯೇ ಒಂದಲ್ಲಾ ಒಂದು ರೀತಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತದೆ. ಇದನ್ನು ವಿರೋಧಿಸುವ ನಿಟ್ಟಿನಲ್ಲಿ ಮಹಿಳೆಯರು ದಿಟ್ಟತನವನ್ನು ತೋರಿಸಬೇಕಿದೆ. ನಮ ಇಲಾಖೆಯಲ್ಲಿ ಕೆಲಸ ಮಾಡುವ ಆಶಾ ಕಾರ್ಯಕರ್ತರು,ಇತರೆ ಮಹಿಳಾ ಸಿಬ್ಬಂದಿ ಕರ್ತವ್ಯ ನಿಮಿತ್ತ ತೆರಳಿದ ವೇಳೆ ಪುರುಷರ ಅನಾವಶ್ಯಕ ಮಾತುಗಳಿಂದ ದೌರ್ಜನ್ಯ ನಡೆಯುತ್ತಿರುವುದು ಕಂಡುಬಂದಿದೆ. ಈ ಸಂದರ್ಭದಲ್ಲಿ ಮಹಿಳೆಯರ ಕರ್ತವ್ಯಕ್ಕೆ ಬೆಲೆಕೊಡದೆ ಅವರ ಮೂಲಜಾತಿ, ಧರ್ಮವನ್ನು ಕಂಡುಕೊಂಡು ಸಲ್ಲದ ಮಾತುಗಳನ್ನು ಆಡುವುದು ಅಸಹಜತೆಯಿಂದ ಕೂಡಿದೆ. ಇಂತಹ ಘಟನೆಗಳನ್ನು ಮೆಟ್ಟಿನಿಂತು ಸೇವೆಯಲ್ಲಿ ತೊಡಗಬೇಕಿದೆ ಎಂದು ಸಲಹೆ ನೀಡಿದರು.

ಒಕ್ಕೂಟದ ಖಜಾಂಚಿ ಭಾನುಮತಿ, ಸದಸ್ಯರಾದ ಸುಮುನಾ, ರಶೀ, ಯಶೋಧಮ, ಯಶಸ್ವಿನಿ ಇತರರಿದ್ದರು.

ಕ್ಯಾಂಡಲ್ ಮೆರವಣಿಗೆ ಮುನ್ನಾ ತಾಲೂಕು ಆರೋಗ್ಯಾಧಿಕಾರಿ ಕಚೇರಿ ಆವರಣದಲ್ಲಿ ವಿಚಾರಗೋಷ್ಠಿ ನಡೆಯಿತು.

# ಒಳ ಮೀಸಲಾತಿ ನಿಗದಿ ಬಳಿಕ ನೇಮಕಾತಿ ಆರಂಭಿಸಲು ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಶೇ. 17ರ ಮೀಸಲಾತಿಯಲ್ಲಿ ಪರಿಶಿಷ್ಟ ಜಾತಿಯ ಎಡಗೈ ಸಮುದಾಯವಾದ ಮಾದಿಗ ಸಮುದಾಯಕ್ಕೆ ಪ್ರಸ್ತುತ ಇರುವ ಮೀಸಲಾತಿಯಲ್ಲಿ ಒಳ ಮೀಸಲಾತಿಯನ್ನು ನಿಗದಿಪಡಿಸಿದ ನಂತರ ಸರ್ಕಾರಿ ಹುದ್ದೆಗಳಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಬೇಕು ಎಂದು ಆಗ್ರಹಿಸಿ ಆಲೂರು ತಾಲೂಕು ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ತಾಲೂಕು ಮಾದಿಗ ದಂಡೋರ ಸಮಿತಿ ಅಧ್ಯಕ್ಷ ಪುಟ್ಟರಾಜು ಮಾತನಾಡಿ, ರಾಜ್ಯದಲ್ಲಿ 101 ಜಾತಿ ಉಪಜಾತಿಗಳಲ್ಲಿ ಶೇ. 15 ರಷ್ಟು ಮೀಸಲಾತಿಯಲ್ಲಿ ಮಾದಿಗ ಸಂಬಂಧಿಸಿದ ಜಾತಿಗಳಿಗೆ ಮೀಸಲಾತಿಯಲ್ಲಿ ಅನ್ಯಾಯವಾಗಿರುವ ಕುರಿತಾಗಿ ಮಾದಿಗ ಜನಾಂಗವು ಸುಮಾರು 30 ವರ್ಷಗಳಿಂದ ಒಳ ಮೀಸಲಾತಿ ನೀಡಬೇಕು ಎಂದು ಹೋರಾಟ ಮಾಡಿಕೊಂಡು ಬಂದಿದೆ. ಇದರ ಫಲವಾಗಿ ಇತ್ತೀಚೆಗೆ ಸುಪ್ರೀಂ ಕೋರ್ಟ್ ಕೂಡ ಪ್ರತಿಯೊಂದು ರಾಜ್ಯಗಳು ಕೂಡ ಒಳ ಮೀಸಲಾತಿಯನ್ನು ಜಾರಿ ಮಾಡಬೇಕು ಎಂದು ಆದೇಶ ಮಾಡಿದ್ದರ ಫಲವಾಗಿ ರಾಜ್ಯ ಸರ್ಕಾರ 6:6:5 ಅನುಪಾತದಲ್ಲಿ ಒಳ ಮೀಸಲಾತಿ ಕಲ್ಪಿಸಿಕೊಟ್ಟು ಈಗ ಇದಕ್ಕೆ ರಾಜ್ಯಪಾಲರ ಅಂಕಿತ ಕೂಡ ಆಗಿದೆ ಎಂದರು.

ಆದರೆ ಇದನ್ನು ಜಾರಿಗೆ ತರಬೇಕಾದ ಸಮಾಜ ಕಲ್ಯಾಣ ಇಲಾಖೆ ಸಚಿವರು, ಅವರ ಸಮಾಜದ ಒಳಿತಿಗಾಗಿ 2013ರ ಆದೇಶದಂತೆ ಶೇ. 15 ಮೀಸಲಾತಿಯ ಉದ್ಯೋಗ ತುಂಬಲು ಡಿ.ಪಿ.ಆರ್ ಮಾಡಿಕೊಂಡಿರುವುದು ಮಾದಿಗ ಸಮಾಜಕ್ಕೆ ಮರಣ ಶಾಸನವಾಗುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಶೇ. 15 ಮೀಸಲಾತಿಯಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸಿಕೊಟ್ಟು ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲ್ಲವಾದರೆ ಸಂಪೂರ್ಣ ಒಳ ಮೀಸಲಾತಿ ಜಾರಿಯಾಗದ ಹೊರತು ಯಾವುದೆ ಸರ್ಕಾರಿ ಹುದ್ದೆಗಳನ್ನು ತುಂಬಬಾರದು ಎಂದರು.

ಮಾದಿಗ ದಂಡೋರ ಸಮಿತಿ ಜಿಲ್ಲಾ ಉಪಾಧ್ಯಕ್ಷ ವೆಂಕಟಯ್ಯ, ತಾ. ಉಪಾಧ್ಯಕ್ಷ ಶಿವಣ್ಣ, ಮಹಿಳಾ ಘಟಕದ ಉಪಾಧ್ಯಕ್ಷೆ ರತ್ನಮ, ಕಾರ್ಯದರ್ಶಿ ವೀರಭದ್ರಯ್ಯ, ಮುಖಂಡರಾದ ಎ.ಟಿ. ಲೋಕೇಶ್, ಮಂಜು ಕಾಮತಿ, ಲೋಕೇಶ್, ಕರಿಯಪ್ಪ, ರಾಮು ಉಪಸ್ಥಿತರಿದ್ದರು.

# ಆರ್ಥಿಕವಾಗಿ ಸದೃಢರಾದರೆ ಉತ್ತಮ ಜೀವನ ಸಾಧ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಆರ್ಥಿಕವಾಗಿ ಸದೃಢರಾದಾಗ ಮಾತ್ರ ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ನೀಡುತ್ತಿರುವ ಸೌಲಭ್ಯಗಳನ್ನು ಜನರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ವಿವಿಧ ಅಭಿವೃದ್ಧಿ ನಿಗಮಗಳ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಿಸಿ ಮಾತನಾಡಿ, ಗಂಗಾ ಕಲ್ಯಾಣ ಯೋಜನೆಯ ಜಾರಿಯಿಂದ ತಳಮಟ್ಟದ ಜನರು ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಜೀವನ ನಡೆಸಲು ಸಾಧ್ಯವಾಗಿದೆ. ನೀರಾವರಿ ಸೌಲಭ್ಯ ಲಭ್ಯವಾಗುವುದರಿಂದ ವರ್ಷಕ್ಕೆ ಒಂದಕ್ಕಿಂತ ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ಅದರಿಂದ ರೈತರ ಆದಾಯವೂ ಹೆಚ್ಚುತ್ತದೆ ಎಂದು ಹೇಳಿದರು.

# ಆರೋಗ್ಯಕರ ಬದುಕಿಗೆ ಹವ್ಯಾಸಗಳು ಮುಖ್ಯ

- ಎನ್.ಆರ್.ಪ್ರಶಾಂತ್,
ಆಪ್ತ ಸಲಹಾ ಮನಃಶಾಸ್ತ್ರಜ್ಞರು,
ಮೊ: 9481545719



ನಿಮ್ಮ ಹವ್ಯಾಸಗಳು ಏನು? ಇದು ಇಂದಿನ ಬಹುತೇಕ ಸಂದರ್ಶನಗಳಲ್ಲಿ ಅಭ್ಯರ್ಥಿಗಳಿಗೆ ಎದುರಾಗುವ ಸಾಮಾನ್ಯ ಪ್ರಶ್ನೆ. ಅಂದರೆ, ಕೇವಲ ವೃತ್ತಿಯಷ್ಟೇ ಮುಖ್ಯವಲ್ಲ, ದಿನ ನಿತ್ಯದ ಒತ್ತಡದ ಬದುಕಿನಿಂದ ಹೊರಬಂದು ಕೆಲವು ಸಮಯ ಮನಸ್ಸಿಗೆ ಇಷ್ಟವಾಗುವ ಸಂಗತಿಗಳ ಜೊತೆ ಕಳೆಯುವುದೂ ಮುಖ್ಯವೆನಿಸುತ್ತದೆ. ಇದಕ್ಕಿಂತ ಮುಖ್ಯವಾಗಿ ಹವ್ಯಾಸಗಳು ನಮ ವ್ಯಕ್ತಿತ್ವವನ್ನು ತಿಳಿಸುತ್ತವೆ, ಬೆಳೆಸುತ್ತವೆ. ಹವ್ಯಾಸಗಳು ಹಲವು, ಕೆಲವರಿಗೆ ಓದುವ ಹವ್ಯಾಸವಾದರೆ, ಇನ್ನು ಕೆಲವರಿಗೆ ಹಳೆಯ ಲೇಖನಗಳನ್ನು ಸಂಗ್ರಹಿಸುವ ಹವ್ಯಾಸ, ಅಂಚೆ ಚೀಟಿಗಳ ಸಂಗ್ರಹ, ನಟ ನಟಿಯರ ಚಿತ್ರಸಂಗ್ರಹ, ಹಳೆಯ ಕಾರುಗಳ, ನಾಣ್ಯಗಳ ಸಂಗ್ರಹ, ಫೋಟೊಗ್ರಫಿ, ಚಿತ್ರಕಲೆ, ಕ್ಯಾಲಿಗ್ರಫಿ, ಸಂಗೀತ, ಟೈಲರಿಂಗ್, ಟೆರ್ರಾಕೋಟಾ, ಹೊಸ ಹೊಸ ಆಹಾರ ತಯಾರಿಕೆ, ಹೇರ್ ಸ್ಟೈಲ್, ಗಾರ್ಡನಿಂಗ್, ಮ್ಯಾಜಿಕ್ಅಥವಾ ಯಕ್ಷಿಣಿ ವಿದ್ಯೆ ಕಲಿಕೆ, ಹೀಗೆ ಸಾಗುತ್ತವೆ. ಹವ್ಯಾಸಗಳ ಪಟ್ಟಿ. ಈಗಿನ ಸ್ಪರ್ಧಾತಕ ಹಾಗು ವೇಗದ ಪ್ರಪಂಚದಲ್ಲಿ ಕೆಲವರಿಗೆ ಹವ್ಯಾಸಗಳಲ್ಲಿ ಆಸಕ್ತಿ ಕಡಿಮೆಯಾದರೂ ಇನ್ನೂ ಕೆಲವರು ಈಗಲೂ ತಮಗಿಷ್ಟವಾದ ಚಟುವಟಿಕೆಗಳಲ್ಲಿ ಕಾರ್ಯಮಗ್ನರಾಗಿರುತ್ತಾರೆ. ವಿದ್ಯಾರ್ಥಿ ಜೀವನದಲ್ಲಿ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಸಾಕಷ್ಟು ಕಾಲಾವಕಾಶಗಳಿರುತ್ತವೆ. ಬೆಳೆದು ದೊಡ್ಡವರಾದ ಮೇಲೆ ಅನೇಕ ಕಾರಣಗಳಿಂದ ಮತ್ತು ಒತ್ತಡದ ಜೀವನದಿಂದಾಗಿ ಅಥವಾ ಸಮಯದ ಅಭಾವದಿಂದಾಗಿ ಹವ್ಯಾಸಗಳ ಕಡೆಗೆ ಗಮನ ಕಡಿಮೆಯಾಗುವ ಸಾಧ್ಯತೆಯಿರುತ್ತದೆ.

ಹವ್ಯಾಸಗಳು ಏಕೆ ಬೇಕು. ನಿತ್ಯವೂ ನಾವು ಮಾಡುವ ಕೆಲಸಗಳು ನಮಗೆ ಇಷ್ಟವಿರಬಹುದು, ಇಲ್ಲದಿರಬಹುದು ಅಥವಾ ಅನಿವಾರ್ಯವಾಗಿರಬಹುದು. ಹೀಗೆ ನಾವು ಮಾಡುವ ಕೆಲಸಗಳ ಕಟ್ಟುಪಾಡುಗಳಿಂದ ನಮಗೆ ದೈಹಿಕ ಮತ್ತು ಮಾನಸಿಕ ಆಯಾಸವಾಗಲಿ, ಒತ್ತಡವಾಗಲಿ ಉಂಟಾಗಬಹುದು. ಆದರೆ ಹವ್ಯಾಸಗಳು ಹಾಗಲ್ಲ, ಅವು ಯಾವತ್ತಿಗೂ ನಮ ಮನಸ್ಸಿಗೆ ಸಂತೋಷವನ್ನುಕೊಡುತ್ತವೆ. ನಮ ಜೀವನ ಶೈಲಿಯಲ್ಲಿ ಹವ್ಯಾಸಗಳಿಗೆ ಸ್ವಲ್ಪ ಸಮಯಕೊಡುವುದರಿಂದ ನಮ ದೈಹಿಕ ಮಾನಸಿಕ ಅರೋಗ್ಯದ ಮೇಲೆ ಒಳ್ಳೆಯ ಪರಿಣಾಮ ಬೀರಿ ಚೈತನ್ಯ ಉಂಟಾಗುತ್ತದೆ. ಆದುದರಿಂದ ಸಮಯವಿಲ್ಲವೆಂಬ ಕಾರಣ ಕೊಡದೆ ಸ್ವಲ್ಪವಾದರೂ ಬಿಡುವು ಮಾಡಿಕೊಂಡು ಹವ್ಯಾಸಗಳಿಗೆ ಸಮಯ ಮೀಸಲಿಡಲು ದೃಢ ನಿರ್ಧಾರ ಮಾಡುವುದರಿಂದ ಸಮಯದ ಸದುಪಯೋಗವಾಗುವುದಲ್ಲದೆ ವ್ಯಕ್ತಿತ್ವ ವಿಕಸನವಾಗುವುದರಲ್ಲಿ ಸಂಶಯವಿಲ್ಲ. ಕೆಲವು ಉತ್ತಮ ಹವ್ಯಾಸಗಳು ನಮ ಬದುಕಿನ ದಿಕ್ಕನ್ನೇ ಬದಲಿಸುತ್ತವೆ. ಈಗಿರುವ ಉತ್ತಮ ಹವ್ಯಾಸಗಳ ಜೊತೆ ಕೆಲವು ಉಪಯುಕ್ತ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದರಿಂದ ಹೊಸ ಹೊಸ ಅನುಭವಗಳಾಗುತ್ತವೆ. ಮನಸ್ಸಿಗೂ ಹಿತವೆನಿಸುತ್ತದೆ. ಒಳಾಂಗಣವಾಗಲಿ ಅಥವಾ ಹೊರಾಂಗಣ ಹವ್ಯಾಸಗಳೇ ಇರಲಿ, ಮನೆಯಲ್ಲಿಯೇ ಚಟುವಟಿಕೆಗಳನ್ನು ಒಳಗೊಂಡಿವೆ. ವೈಯಕ್ತಿಕ ಅಭಿವೃದ್ದಿಗೆ, ಮನೆಯ ಹೊರಗಿನ ಚಟುವಟಿಕೆಗಳು ದೈಹಿಕ ಹಾಗು ಮಾನಸಿಕ ಶಕ್ತಿವೃದ್ಧಿಗೆ ಸಹಾಯಕವಾಗುವುದಲ್ಲದೆ ವಿವಿಧ ರೀತಿಯ ಜನರೊಂದಿಗೆ ಬೆರೆಯುವ ಅವಕಾಶವೂ ಸಿಗುತ್ತದೆ. ಪ್ರಯೋಜನಗಳು: ಜೀವನಕ್ಕೆ ಉಪಯೋಗವಾಗುವ ಹವ್ಯಾಸಗಳಿದ್ದರೆ ಉತ್ತಮ. ಹೊಸ ಹೊಸ ಅನುಭವಗಳು ಮುದ ನೀಡುತ್ತವೆ. ಕೆಲಸದ ಒತ್ತಡದ ತೀವ್ರತೆಯನ್ನು ಕಡಿಮೆ ಮಾಡುತ್ತವೆ, ಕೆಲವು ಹವ್ಯಾಸಗಳಿಂದ ನಮಗೆ ಹಣಕಾಸಿನ ನೆರವೂ ಸಿಗುತ್ತದೆ. ಮನೋವಿಕಾಸಕ್ಕೆ ಸಹಕಾರಿಯಾಗುವುದಲ್ಲದೆ, ಆತವಿಶ್ವಾಸವೂ ಹೆಚ್ಚುತ್ತದೆ. ಕೆಲವೊಮೆ ನಮಲ್ಲಡಗಿರುವ ಪ್ರತಿಭೆಯು ಬೆಳಕಿಗೆ ಬರುತ್ತವೆ. ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು, ಕಲಿಯಲು ಸಾಧ್ಯವಾಗುತ್ತದೆ. ಜೀವನಕ್ಕೆ ಹೊಸ ಹುರುಪನ್ನುತುಂಬುತ್ತವೆ. ಸಂಶೋಧನೆಗಳಿಂದ ತಿಳಿದುಬಂದ ಸಂಗತಿಗಳೆಂದರೆ ಕೆಲವು ನಮಗೆ ಈಗಾಗಲೇ ತಿಳಿದಿರುವ ಹವ್ಯಾಸಗಳಿಂದ ನಮ ಮೆದುಳಿನ ಶಕ್ತಿ, ಸಾಮರ್ಥ್ಯ ಹೆಚ್ಚಾಗುತ್ತದೆ. ಸದಾಚಟುವಟಿಕೆಯಿಂದ ಇದ್ದು ಚುರುಕಾಗಿರುವಂತೆ ಮಾಡುತ್ತವೆ. ಜ್ಞಾಪಕ ಶಕ್ತಿ ಹಾಗು ಏಕಾಗ್ರತೆ ಹೆಚ್ಚುತ್ತದೆ. ಯಾವುದಾದರು ಸಂಗೀತ ವಾದ್ಯದ ಕಲಿಕೆ. ಸಂಗೀತ ನಮಲ್ಲಿ ಹೊಸ ಉತ್ತೇಜನ ತುಂಬುತ್ತದೆ. ಹೊಸ ಹೊಸ ಭಾವನೆಗಳನ್ನು ಪ್ರಚೋದಿಸುತ್ತದೆ. ಸಂಗೀತ ಕೇಳುವುದರಿಂದ ಅಥವಾ ವಾದ್ಯ ನುಡಿಸುವುದರಿಂದ ಜ್ಞಾಪಕ ಶಕ್ತಿ ಹಾಗು ಏಕಾಗ್ರತೆ ಹೆಚ್ಚಾಗುತ್ತದೆ. ನಮಲ್ಲಿನ ಮನೋ ವಿಕಾರಗಳು ಹಾಗು ಮನಸ್ಸಿನ ಸಂಕೀರ್ಣ ಉದ್ವೇಗಗಳು ಕಡಿಮೆಯಾಗುತ್ತವೆ. ಉತ್ತಮ ಪುಸ್ತಕಗಳ ಓದು: ದೇಶ ಸುತ್ತು, ಕೋಶ ಓದು ಎಂಬ ಮಾತಿದೆ. ಇದರಿಂದ ಜ್ಞಾನಾರ್ಜನೆ ಹೆಚ್ಚಾಗುತ್ತದೆ. ಒಂದೇ ರೀತಿಯ ಓದಿಗಿಂತ, ಭಿನ್ನವಾದ ಕಥೆ, ಕಾದಂಬರಿ, ಜೀವನ ಚರಿತ್ರೆ, ಕಥಾ ಸಂಕಲನ ಇತ್ಯಾದಿಗಳು ಹೊಸ ವಿಚಾರಗಳನ್ನು ತಿಳಿಸುತ್ತವೆ. ನಮಲ್ಲಿ ಹೊಸ ಆಲೋಚನೆಗಳು ಬಂದು ನಮ ಗುರಿ ಮುಟ್ಟಲು ನಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಹಾಯಕವಾಗುತ್ತದೆ. ದೈಹಿಕ ವ್ಯಾಯಾಮ: ದೇಹ ಆರೋಗ್ಯವಾಗಿದ್ದರೆ ಮನಸ್ಸುಕೂಡ ಆರೋಗ್ಯವಾಗಿರುತ್ತದೆ. ದಿನನಿತ್ಯ ವ್ಯಾಯಾಮ ಮಾಡುವುದರಿಂದ ಮನಸ್ಸಿನ ಒತ್ತಡ ಕಡಿಮೆಯಾಗುತ್ತದೆ. ಒಳ್ಳೆಯ ನಿದ್ದೆ ಬರುತ್ತದೆ. ಮೆದುಳಿಗೆ ಉತ್ತಮ ರಕ್ತ ಸಂಚಾರವಾಗುತ್ತದೆ, ಹೃದಯದ ಸ್ನಾಯುಗಳಿಗೆ ಶಕ್ತಿ ತುಂಬುವ ವ್ಯಾಯಾಮಗಳಿಂದ ಮೆದುಳಿನಲ್ಲಿ ಹೊಸ ಜೀವಕೋಶಗಳು ಹುಟ್ಟಿಕೊಳ್ಳುತ್ತವೆ. ಮೆದುಳಿನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ಧ್ಯಾನಾಭ್ಯಾಸ: ನಮನ್ನು ನಾವು ಅರಿತುಕೊಳ್ಳುವುದಕ್ಕಾಗಿ ಧ್ಯಾನ ಸಹಾಯ ಮಾಡುತ್ತದೆ. ಮನಸ್ಸಿನ ಒತ್ತಡ ಕಡಿಮೆಯಾಗುವುದರ ಜೊತೆಗೆ ಎಲ್ಲರೀತಿಯ ಚಿಂತೆಗಳಿಗೂ ಇದು ಔಷಧವಿದ್ದಂತೆ. ಮನಸ್ಸು ಪ್ರಶಾಂತವಾಗುವುದರಿಂದ ನಮ ಕಲಿಕೆ ಹಾಗು ಯೋಚನಾ ಲಹರಿಗಳು ಏಕಮುಖಿವಾಗುತವೆ, ದಿನ ನಿತ್ಯಧ್ಯಾನದ ಅಭ್ಯಾಸದಿಂದ ನಮ ಮನಸ್ಸಿನ ಚಂಚಲತೆಯನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಮೆದುಳಿನ ವ್ಯಾಯಾಮ: ನಮ ದೇಹವನ್ನು ಆರೋಗ್ಯವಾಗಿಟ್ಟುಕೊಳ್ಳಲು ವ್ಯಾಯಾಮ ಹೇಗೆ ಅವಶ್ಯಕವೋ ಹಾಗೆಯೇ ಮೆದುಳನ್ನು ಚುರುಕಾಗಿಡಲು ವ್ಯಾಯಾಮ ಅಗತ್ಯ. ನಮ ಮೆದುಳಿಗೆ ಆಗಿಂದಾಗ್ಗೆ ಕೆಲಸ ಕೊಡುತ್ತಿರಬೇಕು. ಹೊಸದನ್ನುಕಲಿಯುತ್ತಿರಬೇಕು. ಸೊಡಕು, ಪದಬಂಧ, ಪಝಲ್, ಗಣಿತದ ಸಮಸ್ಯೆಗಳನ್ನು ಬಿಡಿಸುವುದು, ಚೆಸ್, ಇತ್ಯಾದಿಗಳು ನಮ ಮೆದುಳನ್ನು ಸದಾ ಚುರುಕಾಗಿಡುತ್ತವೆ.

ಯಾವುದಾದರು ಒಂದು ಹೊಸ ಭಾಷೆಯ ಕಲಿಕೆ: ಹೊಸ ಭಾಷೆಯ ಕಲಿಕೆಯಿಂದ ಲೆಕ್ಕವಿಲ್ಲದಷ್ಟು ಪ್ರಯೋಜನಗಳಿವೆ. ಹೊಸ ಹೊಸ ಪದಗಳು, ವ್ಯಾಕರಣ, ನಮ ಮೆದುಳನ್ನು ಚುರುಕಾಗಿಡುತ್ತವೆ. ಮೆದುಳೂ ಕೂಡ ಆರೋಗ್ಯವಾಗಿರುತ್ತದೆ. ಹೆಚ್ಚಿನ ಭಾಷಾ ಸಾಮರ್ಥ್ಯ ಇರುವವರಿಗೆ, ಯೋಜನೆಗಳನ್ನು ರೂಪಿಸುವುದು, ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಸಮಸ್ಯೆಗಳನ್ನು ಪರಿಹಿಸಿಕೊಳ್ಳುವುದು ಸುಲಭವಾಗುತ್ತದೆ.

ಭಾವನೆಗಳಿಗೆ ಅಕ್ಷರ ರೂಪ ಕೊಡುವುದು: ಅಂದರೆ ಬರವಣಿಗೆ. ಇದು ಕೇವಲ ನಮ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುವುದಲ್ಲದೆ ಏಕಾಗ್ರತೆ, ಕಲ್ಪನಾ ಶಕ್ತಿ, ಗ್ರಹಣ ಶಕ್ತಿಯನ್ನು, ಕ್ರಿಯೇಟಿವಿಟಿಯನ್ನು ಹೆಚ್ಚಿಸುತ್ತದೆ. ಇದರಿಂದಾಗಿ ಬರಹಗಾರರಿಗೆ ಉಳಿದವರಿಗಿಂತ ಬುದ್ದಿಶಕ್ತಿ ಪ್ರಮಾಣ ಸ್ವಲ್ಪ ಹೆಚ್ಚಿರುತ್ತದೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ವಿವಿಧ ಸ್ಥಳಗಳಿಗೆ ಪ್ರವಾಸ ಹೋಗುವುದರಿಂದ ನಮ ವಿರಾಮ ಸಮಯದ ಸದುಪಯೋಗವಾಗುವುದಲ್ಲದೆ ಮನಸ್ಸಿಗೆ ಮುದ ನೀಡುತ್ತದೆ. ಇದರಿಂದ ಮಾನಸಿಕ ಒತ್ತಡ, ಏಕತಾನತೆ, ಕಡಿಮೆಯಾಗುತ್ತದೆ. ನಮ ಗ್ರಹಣ ಶಕ್ತಿ ಹೆಚ್ಚಾಗುತ್ತದೆಯಲ್ಲದೆ ಹೊಸತನದ ಕಲಿಕೆಗೆ ಅವಕಾಶವಾಗುತ್ತದೆ. ವಿವಿಧ ರೀತಿಯ ಜನರ ಭೇಟಿ, ಅವರ ಆಹಾರ ಪದ್ಧತಿ, ಸಾಮಾಜಿಕ, ಸಾಂಸ್ಕತಿಕ ಜೀವನ ವಿಧಾನದ ಅರಿವಿನಿಂದ ನಮ ಜೀವನ ವಿಧಾನದಲ್ಲಿ ಉತ್ತಮ ಬದಲಾವಣೆಗಳಾಗುತ್ತವೆ. ಹೊಸ ರೀತಿಯ ಅಡುಗೆ ತಯಾರಿ: ಬಹಳಷ್ಟು ಮಂದಿ ಅಡುಗೆ ಮಾಡುವುದು ಸುಮನೆ ಸಮಯ ಹಾಳು ಎಂದು ಭಾವಿಸಿರುತ್ತಾರೆ. ಆದರೆ ಅಡುಗೆ ಮನೆಯಲ್ಲಿ ಹೊಸರುಚಿ ಮಾಡುವುದನ್ನು ಕಲಿಯುವುದರಿಂದ ನಮ ಕ್ರಿಯೇಟಿವಿಟಿ ಹೆಚ್ಚಾಗುತ್ತದೆ. ಇದೊಂದು ಮಲ್ಟಿ ಟಾಸ್ಕ್ ಇದ್ದ ಹಾಗೆ. ಮೆದುಳು ಚುರುಕಾಗುತ್ತದೆ. ಸಮಯ ನಿರ್ವಹಣೆ, ಶೀಘ್ರ ನಿರ್ಧಾರ ಇತ್ಯಾದಿಗಳಿಗೆ ಸಹಾಯಕವಾಗಿರುತ್ತದೆ.

ಕ್ರೀಡಾಕೂಟದಲ್ಲಿ ಸಕ್ರಿಯ: ಆಟ ಕೇವಲ ದೇಹಕ್ಕಷ್ಟೇ ಅಲ್ಲ. ಮೆದುಳಿಗೂ ವ್ಯಾಯಾಮವಿದ್ದಂತೆ. ಫುಟ್ ಬಾಲ್, ಕ್ರಿಕೆಟ್, ಬ್ಯಾಡಿಂಟನ್, ಬ್ಯಾಸ್ಕೆಟ್ ಬಾಲ್, ಕಬಡ್ಡಿ, ಕೊ-ಕೊ ಇತ್ಯಾದಿ ಆಟಗಳನ್ನಾಡುವುದರಿಂದ ಆತವಿಶ್ವಾಸ, ಸಂವೇದನಾ ಶೀಲತೆ, ಹೊಂದಾಣಿಕೆಯ ಮನೋಭಾವ, ಹಾಗು ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಬಹುದು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-08

**1917:** ರಷ್ಯಾದಲ್ಲಿ ಮಹಿಳೆಯರು ಶಾಂತಿ ಮತ್ತು ಆಹಾರಕ್ಕಾಗಿ ನಡೆಸಿದ ಪ್ರತಿಭಟನೆಗಳು ನಂತರ ಆರಂಭವಾಗಲು ಕಾರಣವಾಯಿತು.

**1921:** ಅಂತಾರಾಷ್ಟ್ರೀಯ ಮಹಿಳಾ ದಿನ ಎಂದು ಆಚರಿಸಲು ಆರಂಭವಾಯಿತು.

**2014:** ಮಲೇಷ್ಯಾದಿಂದ ಚೀನಾಕ್ಕೆ ಹೊರಟ Malaysia Airlines Flight370 ವಿಮಾನ ರಹಸ್ಯವಾಗಿ ಕಾಣೆಯಾಗಿದ್ದು ಜಗತ್ತಿನ ಗಮನ ಸೆಳೆಯಿತು.

### ಜನನ

**1942:** ಭಾರತೀಯ ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್

### ಮರಣ

**1869:** ಪ್ರಸಿದ್ಧ ಫ್ರೆಂಚ್ ಸಂಗೀತ ಸಂಯೋಜಕ Hector Berlioz

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248